ದಿ: 09-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**:

7. ನಿಪಿ-1 ರಲ್ಲಿ ಆರೋಪಿ ಸ್ವಯಂವಾಗಿ ಲಂಚ ಬೇಡಿಕೆ ಇಟ್ಟಿದ್ದ ಬಗ್ಗೆ ಎಲ್ಲೂ ಇಲ್ಲ ಅಂದರೆ ನಿಜ. ದಿಃ 03-03-2014 ಮತ್ತು ದಿಃ 06-03-2014 ರಂದು ನಾನು ಮೇಲಾಧಿಕಾರಿಗಳಿಂದ ಪ್ರತ್ಯೇಕವಾಗಿ ಪರವಾನಗಿ ಪಡೆದುಕೊಂಡಿರಲಿಲ್ಲ ಆದರೆ ತಹಶೀಲ್ದಾರವರ ಆದೇಶದ ಮೇರೆಗೆ ನಾನು ಲೋಕಾಯುಕ್ತ ಕಛೇರಿಗೆ ಹೋಗಿದ್ದೆ. ತಹಶೀಲ್ದಾರವರ ಆದೇಶದ ಪ್ರತಿಯನ್ನು ತನಿಖಾಧಿಕಾರಿಗಳಿಗೆ ಕೊಟ್ಟಿಲ್ಲ. ಇನ್ಸಪೆಕ್ಟರ್ ಬೌಲ್ ನಲ್ಲಿ ಫಿನಾಫ್ಥಿಲಿನ್ ನ್ನು ಹಾಕಿ ನೋಟುಗಳಿಗೆ ಕೈಗಳಿಂದ ಸವರಿದರು. ಯಾವ ದ್ರಾವಣವನ್ನು ಯಾರು ತಯಾರಿಸಿದರು ಅಂತ ನನಗೆ ನೆನಪಿಲ್ಲ. ಹಂತ ಹಂತವಾಗಿ ನಿಪಿ-1 ರಲ್ಲಿ ವಿಷಯವನ್ನು ಬರೆಯಲಾಗಿರುತ್ತದೆ. ನಿಪಿ-1 ನ್ನು PW-2-ಲೋಕೇಶಪ್ಪರವರು ಹೇಳಿ ಬರೆಸಿದರು. ನಿಪಿ-1 ನ್ನು ಬರೆದವರು ತಮ್ಮ ಸಹಿಯನ್ನು ನಿಪಿ-1 ರಲ್ಲಿ ಮಾಡಿದ್ದಾರೆ. ನಿಪಿ-1 ರ ಪಂಚನಾಮೆಯನ್ನು ಬರೆದವರ ಹೆಸರು ನನಗೆ ನೆನಪಿಲ್ಲ. ದಿಃ 01-03-2014 ರಂದು ವಹಿಸುವಿಕೆ ಪಂಚನಾಮೆ ಮಾಡಿದ ಕಾಲಕ್ಕೆ ತೆಗೆದುಕೊಂಡಿದ್ದ article ಗಳನ್ನು ತನಿಖಾಧಿಕಾರಿಗಳ ಸುಪರ್ದಿಯಲ್ಲಿ ಬೀರುವಿನಲ್ಲಿ ಇಟ್ಟಿದ್ದರು. ಇನ್ಸಪೆಕ್ಟರ್ ರವರ ಸಮಕ್ಷಮದಲ್ಲಿ ಲೋಕೇಶಪ್ಪರವರು ಹೇಳಿ ಮಹಜರನ್ನು ಬರೆಸಿದರು. ಆರೋಪಿ ಸಿಗದೇ ಇರುವುದರಿಂದ ಮಹಜರನ್ನು ಮಾಡುವುದನ್ನು 2 ಸಲ ಮುಂದೂಡಲಾಗಿತ್ತು. ಈಗ ನನಗೆ ತೋರಿಸಿದ ಮುಂದೂಡಿದ ನಿಪಿ-2 ಮತ್ತು 4 ರ ಪಂಚನಾಮೆಯನ್ನು ಲೋಕೇಶಪ್ಪರವರು ಹೇಳಿ ಬರೆಸಿದರು. ಆರೋಪಿಯು ದಿಃ 05-03-2014 ರಂದು ಬರುವುದಾಗಿ ಆರೋಪಿಯ ಕಛೇರಿಯ ಸಹಾಯಕರು ತಿಳಿಸಿದರು. ತನಿಖಾಧಿಕಾರಿಗಳು ನಮ್ಮನ್ನು ದಿಃ 05-03-2014 ರಂದು ತಮ್ಮ ಕಛೇರಿಗೆ ಬರಮಾಡಿಕೊಂಡರು. ಅದರಂತೆ ನಾನು ದಿಃ 05-03-2014 ರಂದು ಆರೋಪಿಯ ಕಛೇರಿಗೆ ಹೋಗಿದ್ದೆ. ಅಲ್ಲಿ ಆರೋಪಿ ಇರಲಿಲ್ಲ ಆದ್ದರಿಂದ ಟ್ರ್ಯಾಪ್ ಮಾಡಿಲ್ಲ ವಾಪಸ್ಸು ಬಂದೆವು. ಲೋಕಾಯುಕ್ತ ಕಛೇರಿಯ ತನಿಖಾಧಿಕಾರಿಗಳು ನಮಗೆ ದಿಃ 06-03-2014 ರಂದು 12.00 ಗಂಟೆಗೆ ಬನ್ನಿ ಅಂತ ಹೇಳಿದರು. ದಿಃ 05-

03-2014 ರಂದು ಆರೋಪಿಯು ಕಛೇರಿಯಲ್ಲಿ ಇಲ್ಲ ಅಂತ ಅದರ ಬಗ್ಗೆ ಪಂಚನಾಮೆ ಮಾಡಿಲ್ಲ. ದಿಃ 06-03-2014 ರಂದು ಲೋಕಾಯುಕ್ತ ಕಛೇರಿಯಲ್ಲಿ ನಾನು ಹೋದ ನಂತರ ಪಂಚನಾಮೆ ಮಾಡಿದರು. ಆ ಸಂದರ್ಭದಲ್ಲಿ ಲೋಕಾಯುಕ್ತ ಇನ್ಸಪೆಕ್ಟರ್ ರವರು ಲೋಕೇಶಪ್ಪರವರಿಗೆ ತಮ್ಮ ಕೆಲಸವನ್ನು ಆರೋಪಿಯ ಕಛೇರಿಯಲ್ಲಿ ಆರೋಪಿಗೆ ಹೋಗಿ ಕೇಳಲು ಸೂಚನೆ ನೀಡಿರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ-8 ರಲ್ಲಿ ಪಿರ್ಯಾದಿದಾರರು ಆರೋಪಿಗೆ ಕರೆಂಟ್ ಕೆಲಸ ಆಯಿತಾ ಅಂತ ಸಂಭಾಷಣೆಯು ಕಾಣುವುದಿಲ್ಲ.

ಈ ಹಂತದಲ್ಲಿ ಆರೋಪಿತ ಪರ ವಕೀಲರು ಸಮಯ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.

ದಿ: 09-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**</u>:

8.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.